ಬೇಕಲ್ಲವೇ? ಇಷ್ಟೇ! ಅಥವಾ ಇದಕ್ಕಿಂತ ಹೆಚ್ಚಿಗೆ!' ಅಂದುಬಿಟ್ಟಿದ್ದಾಳೆ. ಅಷ್ಟೇ! ಅವನು ಎಂದಿನಂತೇ ಕೋವಿ ಎತ್ತಿಕೊಂಡು ತೋಟದತ್ತ ಹೊರಟಿದ್ದಾನೆ. ಆಗ ಬೆಳಗಿನ ಏಳೂವರೆಯಷ್ಟಿರಬಹುದು– ಅವಳು ರೊಟ್ಟಿ ತಟ್ಟುತ್ತಿದ್ದಳು. ಯಾಕೆಂದರೆ ಅವಳು ಸತ್ತಾಗ ಅವಳು ಅರ್ಧ ಮಾಡಿಟ್ಟ ರೊಟ್ಟಿಗಳಿನ್ನೂ ಒಲೆಯ ತಿಟ್ಟಿನಲ್ಲಿ ಹಾಗೇ ಇದ್ದವು. ಕಾವಲಿಯ ಮೇಲಿನ ರೊಟ್ಟಿ ಸೀದಿತ್ತು, ಮುಕ್ಕಾಲಿಯ ಮೇಲೆ ಅರ್ಧ ತಟ್ಟಿಟ್ಟ ರೊಟ್ಟಿಯೂ ಹಾಗೇ ಇದ್ದಿದ್ದನ್ನ ನೋಡಿದವರಿದ್ದಾರೆ. ಸರಿ ಇಷ್ಟು ಹೇಳಿ ಅವಳ ಸಾವು ಹೇಗಾಯ್ತೆಂದು ಹೇಳಲಿಲ್ಲ ನೋಡಿ... ಮ್, ಅವನು ಹಾಗೆ ಕೋವಿ ಎತ್ತಿಕೊಂಡು ಹೋದ ಅಂದೆನಲ್ಲ, ಹಾಗೆ ಹೋದ ಅರ್ಧ ಗಂಟೆಗೆಲ್ಲ ಗುಂಡಿನ ಶಬ್ದ ಕೇಳಿಸಿದೆ. ಮತ್ತೆ ಐದೇ ನಿಮಿಷಕ್ಕೆ ಎರಡನೇ ಗುಂಡು! ಅಷ್ಟೇ! ಅಷ್ಟರಲ್ಲಿ ಅವನ ಹೆಂಡತಿಯ ವಿವೇಕವೆಲ್ಲ ಓಡಿಹೋಗಿದೆ. ಅವನು ನಿಜಕ್ಕೂ ಗುಂಡುಹೊಡಕೊಂಡು ಸತ್ತೇ ಹೋದ ಅಂದುಕೊಂಡವಳೇ ಗಾಬರಿಯಲ್ಲಿ ಧುಡಧುಡನೇ ಎದ್ದು ಅಂಗಳದಲ್ಲಿ ತಣ್ಣಗೆ ನಿಂತಿದ್ದ ಬಾವಿಯೊಳಗೆ ಹಾರಿಬಿಟ್ಟಿದ್ದಾಳೆ. ಇತ್ತ ಕೆಲವರು ಅವಳ ಹೆಣ ಎತ್ತಿದರೆ ಕೆಲವರು ಅತ್ತ ತೋಟದಲ್ಲಿ ಗುಂಡುಹೊಡಕೊಂಡು ಸತ್ತವನ ಶವ ಹುಡುಕಿ ಹೋಗಿದ್ದಾರೆ. ಆದರೆ ಅವರಿಗೆ ಏಲಕ್ಕಿ ತೋಟದ ಬರೆಕಾಡಿನಲ್ಲಿ ಮರವೊಂದಕ್ಕೆ ಒರಗಿಸಿಟ್ಟಿದ್ದ ಅವನ ಕೋವಿ ಮಾತ್ರ ಸಿಕ್ಕಿದೆ. ಅಲ್ಲಿಷ್ಟು ರಕ್ತ ಚೆಲ್ಲಿದ್ದಂತೂ ನಿಜ. ಆದರೆ ಬರೆಕಾಡಿನ ಕಣಿವೆಗೆ ಇಳಿಯುವಷ್ಟು ಇಳಿದು ನೋಡಿದರೂ ಅವನ ಹೆಣವಂತೂ ಸಿಗಲಿಲ್ಲ. ಇದೀಗ ಕತೆಯ ಕ್ಲೈಮಾಕ್ಸ್. ಇದನ್ನೂ ಕೇಳಿ. ಅವೊತ್ತು ಅವನ ಹೆಂಡತಿಯ ಸಾವಿನ ದಿನ ಇವಳು ಮೊಟ್ಟಮೊದಲ ಬಾರಿಗೆ ಅಲ್ಲಿಗೆ ಹೋಗಿದ್ದಳು. ನಮ್ಮ ಕಡೆಯ ಸಂಪ್ರದಾಯದಂತೆ ಬಿಳಿಸೀರೆ ಉಟ್ಟುಕೊಂಡೇ ಸಾವಿಗೆ ಹೋಗಿಬಂದಳು. ಬಂದಮೇಲೆ ಸ್ನಾನ ಮಾಡಿ ಮತ್ತೆ ಬಿಳಿಸೀರೆಯನ್ನೇ ಉಟ್ಟಳು! ಅವಳ ಗಂಡನಿಗೆ ಆ ಕ್ಷಣ ಹೇಗಾಗಿರಬೇಕು ಹೇಳಿ? ಅವಳು ಯಾವತ್ತೂ ಗಂಡನ ಯಾವುದೇ ಬೇಕುಬೇಡವನ್ನೂ ತಳ್ಳಿಹಾಕಿರಲಿಲ್ಲ. ಅವನ ಜೊತೆ ಚೆನ್ನಾಗೇ ಇದ್ದಳು. ಅವನಾದರೂ ಅಷ್ಟೇ! ಆದರೆ ಅವಳು ಅವೊತ್ತು ಹಾಗೆ ಮಾಡಿ ಅವನನ್ನು ಆ ಕ್ಷಣವೇ ಕೊಂದ ಹಾಗಾಗಲಿಲ್ಲವೇ? ಇಲ್ಲ, ನೀನು ಯಾವತ್ತಿಗೂ ನನ್ನ ಪಾಲಿನ ಗಂಡನಾಗಿರಲಿಲ್ಲ, ಯಾವತ್ತೋ ನನ್ನ ಪಾಲಿಗೆ ಸತ್ತು ಹೋಗಿದ್ದೆ ಅನ್ನಬಯಸಿ ಹಾಗೆ ಮಾಡಿದಳೇ? ಅಲ್ಲಿಗೆ ಅವನು ಅವಳನ್ನು ಅಷ್ಟೊಂದು ನಂಬಿದ್ದಕ್ಕೆ ಏನು ಫಲವಾದ ಹಾಗಾಯ್ತು? ಗಂಡನ ಕತೆ ಇರಲಿ, ಆ ಗುಂಡುಹೊಡಕೊಂಡು ಸತ್ತ ಅವಳ ಆ ಗೆಳೆಯನ ಹೆಣವಾದರೂ ಸಿಕ್ಕಿತೆ? ಸಿಗಲಿಲ್ಲ. ನಿಜಕ್ಕೂ ಸತ್ತನೇ ಅಥವಾ ಹೆಂಡತಿಯನ್ನು ಸುಳ್ಳೇ ಹೆದರಿಸಲು ಗುಂಡು ಹೊಡೆದವನು, ಕಡೆಗೆ ತನ್ನ ಈ ಕೆಲಸದಿಂದಾಗಿ ಹೆಂಡತಿ ನಿಜಕ್ಕೂ ಸತ್ತು ಹೋದಳೆಂದು ಹೆದರಿ ಓಡಿಹೋದನೇ? ಹೀಗೆ ಯಾವುದೂ ಖಾತ್ರಿ ಇರದ ಸಮಯದಲ್ಲಿ ಅವಳಿಗೆ ಹಾಗೆ ಒಂದೇ ಸಲಕೆ ಇಬ್ಬರು ಗಂಡಸರನ್ನು ಕೊಲ್ಲುವ ಉದ್ದೇಶವೇನಿತ್ತು? ಅವಳು ಹೀಗೆ ಮಾಡಿ ಏನನ್ನು ಹೇಳಿದಳು? ಅವಳು ನಿಜವಾಗಿಯೂ ಜೀವನದ ಉದ್ದಕ್ಕೂ ಏನನ್ನು ಭಾವಿಸುತ್ತ ಬದುಕಿದ್ದಳು? ಅವಳಿಗೆ ಯಾರಿಂದ ಯಾವ ನಿರೀಕ್ಷೆಯಿತ್ತೆಂದು ಎಷ್ಟು ಯೋಚಿಸಿದರೂ ನನಗೆ ತಿಳಿಯುವುದಿಲ್ಲ. ಗಂಡಸರು ಬದುಕನ್ನು ನೋಡುವ ಬಗೆಗೂ ಹೆಂಗಸರು ನೊಡುವ ಬಗೆಗೂ ಬಹಳ ವ್ಯತ್ಯಾಸವಿದೆ ಎಂದಷ್ಟೇ ಅನಿಸುತ್ತದೆ. ಹೆಂಗಸರು ಬದುಕನ್ನಾಗಲೀ ಭಾವನೆಯನ್ನಾಗಲೀ ಅನುಭವಿಸುವಷ್ಟು ತೀವ್ರವಾಗಿ ನಾವು ಗಂಡಸರು ಅನುಭವಿಸುವುದಿಲ್ಲವೆಂದೇ ನನ್ನ ಅನಿಸಿಕೆ. ಮೇಲ್ನೋಟಕೆ ಗಂಡಸರು ಬದುಕನ್ನು ತೆಗೆದುಕೊಳ್ಳುವಷ್ಟು ಸರಾಗವಾಗಿ ಹೆಂಗಸರು ತೆಗೆದುಕೊಳ್ಳಲಾರರು ಅನಿಸುತ್ತದೆ. ಅವರೇಕೆ ಅಷ್ಟು ಭಾವುಕರಾಗಿರುತ್ತಾರೆಂದು ನಾನು ಬಹಳಷ್ಟು ಬಾರಿ ಯೋಚಿಸುತ್ತೇನೆ. ಅವರ ಆ